
# ಅಧ್ಯಾಯ 13

ಶ್ರೀ ಗಣೇಶಾಯ ನಮಃ     ಸದ್ಗುರು ಸಿದ್ಧಾರೂಢ ನಮಃ



ಛಂದ: ಭವಜಲಧಿಯೊಳು ತಳಮಳಿಸುತಿಹರನ್ನು ಗುರು ತಾರಿಸುವನು
ಪವನವಿಜಯ ಮನೋಜಯಾದಿಗಳಿಲ್ಲದಲೆ ಅನುಗ್ರಹಿಪನು
ಶ್ರವಣಮಾಡಿ ಚರಿತ್ರವನ್ನು ಗುರುನಾಮ ಯಾವನು ನುಡಿವನು
ತವಕದಿಂದಲಿಯವನ ರಕ್ಷಿಸುವವನು ಸಿದ್ಧಾರೂಢನು...

ಶ್ರೀ ಸಿದ್ಧಾರೂಢ ಭಗವಂತನೇ ನಿನಗೆ ಜಯಜಯಕಾರವಿರಲಿ. ನೀನೇ ಸಮಸ್ತ ಅನಾಥರಾದಂಥವರನ್ನು ಪಾಲಿಸುತ್ತಿರುವಿ. ಮತ್ತು ನೀನೇ ಮುಮುಕ್ಷುಗಳನ್ನು ಮುಕ್ತಿಪಂಥಕ್ಕೆ ಹಚ್ಚಿ, ತ್ರಿಜಗತ್ತಿನಲ್ಲಿ ಕೀರ್ತಿಯನ್ನು ಬೆಳೆಸುವಿ, ಸರ್ವಜನರ ಉದ್ಧಾರಾರ್ಥವಾಗಿ ನೀನೇ ಈ ಕಥಾಮೃತವನ್ನು ರಚಿಸಿರುವಿ ; ಇದನ್ನು ಪಠಿಸುವವರು ಭಕ್ತಿಯುಕ್ತರಾಗಿ ಕಡೆಗೆ ನಿನ್ನ ಕೃಪೆಯಿಂದ ಮುಕ್ತಿಯನ್ನು ಹೊಂದುವರು. ಹಿಂದಿನ ಅಧ್ಯಾಯದಲ್ಲಿ ಏನು ಕಥೆಯಾಯಿತೆಂದರೆ, ಭೀಮಪ್ಪನು ಸದ್ಗುರುಗಳನ್ನು ಕುರಿತು, ಪುತ್ರ ಬೇಡಿದಾಗ, ಮಹಾತ್ಮರು ತಾವೇ ಅವರ ಪುತ್ರರಾದರು. ಈ ಭಾವದಿಂದ ಸಿದ್ಧರು ಅವರ ಗೃಹದಲ್ಲಿ ಕ್ರೀಡಿಸುತ್ತಿದ್ದರು. ರಾತ್ರಿಕಾಲದಲ್ಲಿ ಭೀಮಪ್ಪನ ಗೃಹದೊಳಗೆ ಇದ್ದು, ಹಗಲಿನಲ್ಲಿ ಡುಮಗೇರಿ ಕಟ್ಟೆಗೆ ಬರುತ್ತಿದ್ದರು. ಹೀಗಿರುತ್ತಾ ಹುಬ್ಬಳ್ಳಿ ಪೇಟೆಯಲ್ಲಿ ಗೌರಿ ಉತ್ಸವದ ಸಲುವಾಗಿ ಜನರೆಲ್ಲಾ ಕೂಡಿ ಒಂದು ದೊಡ್ಡ ರಥವನ್ನು ತಯಾರಿಸಿದ್ದರು. ಆದರೆ ಉತ್ಸವದ ದಿವಸ, ಆ ಜನರೊಳಗೆ ಕಲಹವಾಯಿತು, ಮತ್ತು ರಥೋತ್ಸವಕ್ಕೆ

ಪ್ರತಿಬಂಧಕವಾಯಿತು. ಅದೇ ಸಮಯದಲ್ಲಿ ಸಿದ್ಧರು ಡುಮಗೇರಿ ಕಟ್ಟೆಯ ಮೇಲೆ ಕೂತಿದ್ದರು. ಆಗ ಪ್ರಸಿದ್ಧರಾದ ರಥಪಕ್ಷದ ಜನರು ಸದ್ಗುರುಗಳ ಮುಂದೆ ಬಂದು, ಸಾಷ್ಟಾಂಗ ನಮಸ್ಕಾರ ಮಾಡಿ - "ಹೇ ಪ್ರಭೋ, ನಮ್ಮ ದೀನ ವಿನಂತಿಯನ್ನು ಶ್ರವಣ ಮಾಡಬೇಕು. ನಾವೆಲ್ಲರೂ ಕೂಡಿ ಒಂಭತ್ತು ಕಳಸದ ರಥವನ್ನು ಸಿದ್ಧಪಡಿಸಿದ್ದೇವೆ. ಆದರೆ ಅದರ ಮೇಲೆ ಸ್ಥಾಪಿಸುವದಕ್ಕೆ ಯಾವ ದೇವರನ್ನು ತರಬೇಕು ಎಂದು ನಮ್ಮೊಳಗೆ ಕಲಹವಾಗಲು, ನಾವು ಏನು ಹೇಳಿದವೆಂದರೆ, "ಶ್ರೀ ಸಿದ್ಧಾರೂಢ ಮಹಾತ್ಮರಿರುವಾಗ, ಅವರಿಗಿಂತ ಹೆಚ್ಚಿನ ದೇವರು ಮತ್ತಾರೂ ಇಲ್ಲ, ಆದ್ದರಿಂದ ಅವರೆ ರಥದಲ್ಲಿ ಕೂಡ್ರುವದಕ್ಕೆ ಯೋಗ್ಯರು" ಎಂದು ನಾವು ಹೇಳಲು, ಎಲ್ಲರೂ ಇದಕ್ಕೆ ಒಪ್ಪಿ ಕೊಂಡರು. "ಈಗ ಮಹಾತ್ಮರೇ, ಅಲ್ಲಿಯವರೆಗೆ ಬಂದು, ರಥವನ್ನೇರಿ, ನಮ್ಮೆಲ್ಲರಿಗೆ ಆನಂದಪಡಿಸಬೇಕು" ಎಂದು ಪ್ರಾರ್ಥಿಸಲು ಸಿದ್ಧರು ಅಂದುಕೊಳ್ಳುತ್ತಾರೆ. ಪ್ರಾರಬ್ಧ ಕಾರ್ಯಗಳು ವಿಚಿತ್ರವಾಗಿವೆ, ಎಂದು ಸದ್ಭಕ್ತರ ಕೂಡ ಹೋದರು. ಅವರು ರಥ ಇದ್ದಲ್ಲಿಗೆ , ಸಿದ್ದಾರೂಢರನ್ನು

ಕರೆದುಕೊಂಡು ಹೋಗಿ, ಮಹಾತ್ಮರನ್ನು ವಸ್ತ್ರಾಭರಣಗಳಿಂದ ಭೂಷಿಸಿದವರಾಗಿ, ಸರ್ವರೂ ನಾಮಘೋಷವನ್ನು ಮಾಡುತ್ತಾ, ರಥದ ಮೇಲೆ ಕುಳ್ಳಿರಿಸಿದರು. "ಕಲ್ಯಾಣಮಸ್ತು' ಎಂದು ಸಿದ್ಧಾರೂಢರು ಸರ್ವರಿಗೂ ಆಶೀರ್ವಾದವನ್ನು ಕೊಟ್ಟರು. ರಥದ ಮೇಲೆ ಸಿದ್ಧಮೂರ್ತಿಯನ್ನು ಕಂಡು ಅಬಾಲ ವೃದ್ಧರೆಲ್ಲರಿಗೂ ಆನಂದವಾಯಿತು. ಸಿದ್ಧರ ವೈಭವವನ್ನು ನೋಡಿ, ಭೀಮಪ್ಪನ ಆನಂದವು ವರ್ಣಿಸಲಾಗದು. ಆತನು ಮನೆಯೊಳಗಿನ ದಾಗಿನೆಗಳನ್ನು ಮಾರಿ, ಬಡಜನರಿಗೆಲ್ಲ ಪ್ರಸಾದ ಮಾಡಿಸಿದನು. ರಥದ ಮೇಲೆ ಮಹಾತ್ಮರು ಕೂತಿರುವ ಹೀಗೆ ವಿಚಾರ ಮಾಡುತ್ತಿದ್ದರು - ಎಪ್ಪತ್ತೆರಡು ನಾಡಿಗಳಿಂದ ಕೂಡಿದ ಈ ದೇಹವೇ ರಥವು, ಅದರ ಮೇಲೆ ಆತ್ಮನು ತಾನೇ ಕುಳಿತುಕೊಂಡು ಸರ್ವವೃತ್ತಿಗಳಿಗೆ ಅನುಮೋದನ ಕೊಡುವನು.ಸುಷುಪ್ತಿ ಕಾಲದಲ್ಲಿ, ಯಾವ ಈ ಆತ್ಮನು ಆನಂದ ಘನನಾಗಿರುವನೋ ಆತನೇ ನಾನು ನಿತ್ಯನಾಗಿರುತ್ತೇನೆ. ರಥೋತ್ಸವವಾದ ಬಳಿಕ, ಸಿದ್ಧರು ರಥದಿಂದ ಇಳಿದು, ಡುಮಗೇರಿ ಕಟ್ಟೆಯ ಮೇಲೆ ಶಾಂತರಾಗಿ

ಕುಳಿತುಕೊಂಡರು. ಅಂದಿನಿಂದ ಜನರು ಆಗಾಗ ಬಂದು ಸಿದ್ಧರನ್ನು ಪೂಜಿಸುತ್ತಿದ್ದರು, ಮತ್ತು ಅಪಾರ ದ್ರವ್ಯವನ್ನು ಖರ್ಚು ಮಾಡಿ, ಸಮಾರಾಧನೆಗಳನ್ನು ಮಾಡಿಸುತ್ತಿದ್ದರು. ಯಾವ ಚಿದ್ಘನಾನಂದ ಸಮಾಧಿಸ್ಥಾನದಲ್ಲಿ ಸಿದ್ಧ ಗುರುಗಳು ಇರುತ್ತಿದ್ದರೊ, ಅಲ್ಲಿಗೆ ಅವರನ್ನು ಪೂಜಿಸಲಿಕ್ಕೆ ಬಹು ಜನ ಬಂದು, ಭೋಜನಾದಿಗಳನ್ನು ಮಾಡುತ್ತಿದ್ದರು. ಅದರ ದಶೆಯಿಂದ, ಕಾರಡಗಿ ಮಲ್ಲಪ್ಪಾ, ಶಿರಗುಪ್ಪಿ ಹೊಂಬಣ್ಣ, ಎಂಬ ಸದ್ಗುರುಗಳ ಪ್ರೀತಿಗೆ ಪಾತ್ರರಾದ ಗೃಹಸ್ಥರು; ಆ ಸ್ಥಾನದಲ್ಲಿ ಎರಡು ದೊಡ್ಡ ಧರ್ಮಶಾಲೆಗಳನ್ನು ಕಟ್ಟಿಸಿದರು. ಮತ್ತು ನೀರಿಗಾಗಿ ಒಂದು ಭಾವಿಯನ್ನು ಕಟ್ಟಿಸಿದರು. ಈ ಪ್ರಕಾರ ಮನೋಹರವಾದ ಸಿದ್ಧಾಶ್ರಮವು ಈ ಸ್ಥಾನದಲ್ಲಿ ರಚಿಸಲ್ಪಟ್ಟಿತು. ದೇಶದಲ್ಲಿ ಕ್ಷಾಮಕಾಲವು ಬಂದಾಗ, ಬಹಳ ಜನರು ಕ್ಷುತ್ಪೀಡಿತರಾಗಿರಲು, ಸಿದ್ಧಾರೂಢರ ಭಕ್ತರೆಲ್ಲರೂ ಕೂಡಿ, ಆನಂದದಿಂದ ಆ ಜನರಿಗೆ ಊಟ ಮಾಡಿಸಿದರು.

ಇದಕ್ಕೋಸ್ಕರ ಸಿದ್ಧಾರೂಢರು ಆ ಭಕ್ತರನ್ನು ಕುರಿತು, -"ನೀವು ಬಡಜನರಿಗೆಲ್ಲ ತೃಪ್ತಿ ಮಾಡಿದಿರಿ. ಆದ್ದರಿಂದ ನಮಗೆ ಬಹಳ

ಆನಂದವಾಯಿತು, ಅನ್ನಪೂರ್ಣಾದೇವಿಯ ಕೃಪೆಯಿಂದಲೂ ದೀನ ಜನರ ಆಶೀರ್ವಾದದಿಂದಲೂ, ನಿಮಗೆಲ್ಲ ಆನಂದ ಮುಕ್ತಿಯಾಗುವದು, ಮತ್ತು ದೇಹಾವಸಾನ ಕಾಲದಲ್ಲಿ ವಿದೇಹ ಮುಕ್ತಿಯು ಪ್ರಾಪ್ತಿಯಾಗುವದು ಎಂದರು. ಕಾರ್ತಿಕ ಶುದ್ಧ ಪೂರ್ಣಿಮೆ ದಿವಸ ಹೊಂಬಪ್ಪನೆಂಬ ಸಾಹುಕಾರನು ಸಿದ್ಧಾಶ್ರಮದಲ್ಲಿ ಬಡಜನರಿಗೆ ಬಹು ಆದರದಿಂದ ಅನ್ನಪಾನವನ್ನು ಕೊಟ್ಟು ಸದ್ಗುರುಗಳನ್ನು ಸಂತೋಷಪಡಿಸಿದನು. ಆ ದಿನ ಸರ್ವರಿಗೂ ಅಪಾರವಾದ ಆನಂದವಾಯಿತು, ಮತ್ತು ಸರ್ವರೂ ಕೂಡಿ, ಇದೇ ಪ್ರಕಾರ ಪ್ರತಿ ವರ್ಷವೂ ಅನ್ನ ಪ್ರಸಾದ ಮಾಡಿಸಬೇಕೆಂದು ನಿಶ್ಚಯಿಸಿದರು. ಮತ್ತು ಆ ದಿನದ ಆನಂದ ಸಂಪೂರ್ಣ ಮಾಡುವದಕ್ಕೆ ಸದ್ಗುರುಗಳ ರಥೋತ್ಸವ ಮತ್ತು ಮಂಟಪಪೂಜಾ ವಿಧಾನ ನಡೆಸಬೇಕೆಂತಲು, ನಿರ್ಣಯ ಮಾಡಿದರು. ಕೆಲವು ವರ್ಷಗಳವರೆಗೆ ಇದೇ ಪ್ರಕಾರ ನಡೆಸಿದರು. ಆಮೇಲೆ ಭಕ್ತ ಜನರಲ್ಲರೂ ಇದೇ ಉತ್ಸವವು ಶಿವರಾತ್ರಿಗೆ ಮಾಡಬೇಕೆಂದು ನಿರ್ಣಯಿಸಿದ ಪ್ರಕಾರ

ಅಂದಿನಿಂದ ಶಿವರಾತ್ರಿಯ ಮಹೋತ್ಸವವೇ ಪ್ರಸಿದ್ಧಿಯಾಯಿತು. ಆ ಪುಣ್ಯಕಾಲದ ಮಹೋತ್ಸವವನ್ನು ನೋಡಲಿಕ್ಕೆ ದೂರ ದೂರ ದೇಶದ ಜನರು ಬರುವಂಥವರಾದರು. ಈ ಉತ್ಸವ ಕಾಲದಲ್ಲಿ ಏಳು ದಿವಸ ಪರ್ಯಂತ ಪಂಚಾಕ್ಷರಿ ಮಂತ್ರಘೋಷವು ರಾತ್ರಿ ಹಗಲು ನಡೆಯುತ್ತಿರುವುದು. ಪ್ರಾತಃ ಕಾಲದಲ್ಲಿ ಸದ್ಗುರುನಾಥರು ಮಂಟಪದಲ್ಲಿ ಉಚ್ಚಾಸನದ ಮೇಲೆ ಕೂತುಕೊಂಡಿದ್ದು, ಸ್ವಮುಖದಿಂದ ವೇದಾಂತ ವಿಷಯಗಳನ್ನು ನಿರೂಪಿಸುವರು. ಅದನ್ನು ಕೇಳಿದವರಿಗೆ ಅಮೃತವು ತುಚ್ಛವೆನಿಸುವದು. ಅನಂತರ ನಾಲ್ಕು ತಾಸು ಹೊತ್ತು ಬಂದ ಮೇಲೆ, ಸರ್ವವರ್ಣದ ಜನರಿಗೆ ವರ್ಣೋಚಿತವಾಗಿ ಭೋಜನ ಸಮಾರಂಭಗಳು ಅಲ್ಲಲ್ಲಿ ನಡೆಯುತ್ತವೆ. ಬಡ ಅನಾಥ ಜನರಿಗೆ ಮುಖ್ಯವಾಗಿ ಕರೆಕರೆದು ಊಟ ಮಾಡಿಸುತ್ತಾರೆ. ಅಪರಾಹ್ನದಲ್ಲಿ ಕೀರ್ತನ, ಗಾಯನ, ಭಜನೆ ಮತ್ತು ವೇದಾಂತ ಅಥವಾ ಭಕ್ತಿಪರ ವ್ಯಾಖ್ಯಾನ, ಸದ್ಗುರುಗಳ ಸನ್ನಿಧಿಯಲ್ಲಿ ನಡೆಯುತ್ತವೆ.ಈ ಉತ್ಸವ ಕಾಲದಲ್ಲಿ ನಿತ್ಯ ಪ್ರದೋಷ

ಕಾಲದಲ್ಲಿ ದಿವ್ಯ ಮಂಟಪದಲ್ಲಿ ಸದ್ಗುರುಗಳನ್ನು ಕುಳ್ಳಿರಿಸಿ ಬಹು ವೈಭವದಿಂದ ಪೂಜೆಯನ್ನು ಮಾಡುತ್ತಾರೆ. ಆ ಸಮಯದಲ್ಲಿ ಲಕ್ಷಾವಧಿ ಜನರು ನಾಮಘೋಷ ಮಾಡಿ, ತಮ್ಮ ಅತ್ಯಾನಂದವನ್ನು ಪ್ರದರ್ಶನ ಮಾಡುವರು. ಈ ಪ್ರಕಾರ ಏಳು ದಿನ ಉತ್ಸವ ನಡಿಯುವುದು. ಅಂತ್ಯದಿನ, ಸದ್ಗುರುಗಳನ್ನು ರಥಾರೋಹಣ ಮಾಡಿಸಿ ಬಹು ಆನಂದದಿಂದ ರಸ್ತೆಯ ಮೇಲೆ ಮೆರೆಯಿಸುತ್ತಾರೆ. ಆ ದಿನದ ಆನಂದವು ಅವರ್ಣನೀಯವಾದದ್ದು.ಯಾವಾತನ ಪುಣ್ಯವು ಅಗಣಿತವಾಗಿರುವದೋ ಆತನಿಗೇನೇ ಈ ಉತ್ಸವ ನೋಡುವುದು ಪ್ರಾಪ್ತವು. ಈ ಸಮಯದಲ್ಲಿ ಯಾವಾತನಿಗೆ ಸದ್ಗುರು ದರ್ಶನವಾಗುವದೋ ಆತನು ಈ ಜನ್ಮದಲ್ಲಿಯೇ ಜೀವನ್ಮುಕ್ತನಾಗುವನು. ಯಾವ ಸಿದ್ಧ ಸದ್ಗುರು ಶಿಷ್ಯನ ಹೃತ್ತಾಪಹಾರಕನಾಗಿಯೂ, ಭವಸಿಂಧು ತಾರಕನಾಗಿಯೂ, ಜ್ಞಾನಿಯೊಳಗೆ ನಾಯಕನಾಗಿಯೂ ಇರುವನೋ, ಆತನು ಮುಮುಕ್ಷು ಜನರಿಗೆ ಪ್ರತಿಪಾಲಕನಾಗಿಯೂ ಇರುವನು. ನದಿಯು ಯಾವ ಸ್ಥಾನದಲ್ಲಿ ಉಗಮವಾದರೂ, ಸಮುದ್ರವನ್ನು

ಹ್ಯಾಗೆ ಶೋಧಿಸಿಕೊಂಡು ಹೋಗುವದೋ  ಹಾಗೆ ಲೋಕದ ಮುಮುಕ್ಷು ಜನರೆಲ್ಲರೂ ಸಿದ್ಧ ಚರಣಗಳನ್ನು  ಹುಡುಕುತ್ತ ಬಂದು, ಇಲ್ಲಿ ಶಾಂತಿಯನ್ನು  ಹೊಂದುವರು. ಈ ಪ್ರಕಾರ ಶ್ರೀ ಅಖಂಡ ಸಚ್ಚಿದಾನಂದ ಸ್ವರೂಪಿಗಳಾದ ಸಿದ್ಧಾರೂಢ ಸದ್ಗುರುನಾಥರು ಸಿದ್ಧಾಶ್ರಮದಲ್ಲಿ ವಿರಾಜಮಾನರಾಗಿರುತ್ತಿದ್ದರು. ಆಗ ಒಬ್ಬ  ಬಾಲಕನು ಸಂಸಾರದೊಳಗೆ ಬಹು ದುಃಖದಿಂದ ಪೀಡಿತನಾಗಿ  ತನ್ನ ಮನಸ್ಸಿನಲ್ಲಿ ಹೀಗೆ ಅಂದುಕೊಳ್ಳುತ್ತಾನಲ್ಲ, ಈ ನನ್ನ ಹೃತಾಪವನ್ನು  ಸದ್ಗುರುನಾಥನ ಹೊರತು ಮತ್ಯಾರೂ ಪರಿಹರಿಸಲಾರರು, ಎಂದು ಸದ್ಗುರುಗಳನ್ನು  ಶೋಧನೆ ಮಾಡುತ್ತ ಕಟ್ಟಕಡೆಗೆ ಸಿದ್ಧಾರೂಢರ  ಕೀರ್ತಿಯನ್ನು  ಕೇಳಿ, ಈ ಸ್ಥಾನಕ್ಕೆ  ಬಂದನು. ದೂರದಿಂದ ಆ ಬಾಲಕನು ಸದ್ಗುರುನಾಥರನ್ನು  ನೋಡಿದಾಕ್ಷಣ ಸಾಷ್ಟಾಂಗ ನಮಸ್ಕಾರ ಮಾಡಿ, ದೀನಭಾವದಿಂದ ಕೈಜೋಡಿಸಿ ಸಮೀಪ ಬಂದು ಸಮ್ಮುಖದಲ್ಲಿ ನಿಂತುಕೊಂಡನು.ಮತ್ತು ಅಷ್ಟಭಾವಯುಕ್ತನಾಗಿ, "ಹೇ ಪರಶಿವಮೂರ್ತಿಯಾದ ಗುರುರಾಯನೇ, ದೀನನಾದ

ನನ್ನ ಮೇಲೆ ದಯೆ ಮಾಡು.ಅನಾಯಾಸದಿಂದ ಹೃತ್ತಾಪವನ್ನು ಹರಣಮಾಡಲಿಕ್ಕೆ ನೀನು ಸಮರ್ಥನಿದ್ದೀ.' ಎಂದು ಪ್ರಾರ್ಥಿಸಲು ಈತನು ಶುದ್ಧ ಅಧಿಕಾರಿ ಇದ್ದಾನೋ ಇಲ್ಲವೋ ಪರೀಕ್ಷಿಸೋಣ ಎಂದು ಆತನಿಗೆ ಸದ್ಗುರುಗಳು ಉದಾಸೀನ ಮಾಡಿಬಿಟ್ಟರು. ವಿವೇಕಾದಿ ಸಾಧನ ಸಂಪನ್ನನಾದ ಆ ಬಾಲಕನು, ತಾನು ಅಧಿಕಾರಿಯಲ್ಲವೆಂದು ಗುರುಗಳು ತನ್ನನ್ನು ನಿರಾಕರಣ ಮಾಡಿದರಂತ ತಿಳಿದುಕೊಂಡು. ಹ್ಯಾಗೆ ರೂಪ ನೋಡಲಿಕ್ಕೆ ನೇತ್ರ ಕಾರಣವೋ, ಹಾಗೆ ಗುರುಕೃಪಾ ಪಡಿಯಲಿಕ್ಕೆ ಗುರುಸೇವೆಯೇ ಕಾರಣವೆಂದು ತಿಳಿದು, ಆ ಬಾಲಕನು ಸದ್ಗುರು ಸೇವೆ ಮಾಡುವುದರಲ್ಲಿ ಪ್ರವರ್ತನಾದನು. ದೇಹದಲ್ಲಿ ಪೂರ್ಣ ನಿರಭಿಮಾನನಾಗಿ ಆ ಹುಡುಗನು ಸೇವಾ ಮಾಡುತ್ತಿರುವಾಗ, ಗುರುಗಳು ಅವನ ಶ್ರದ್ದೆಯ ದೃಢತೆ ನೋಡುವುದಕ್ಕೆ ಒಮ್ಮೊಮ್ಮೆ ಅನ್ನ ಸಹಾ ಆತನಿಗೆ ಕೊಡುತ್ತಿದ್ದಿಲ್ಲ. ಆದರೂ ಆ ಬಾಲಕನು ಪೂರ್ಣ ಸದ್ಭಕ್ತಿಯಿಂದ ಗುರುಸೇವೆಯಲ್ಲಿ ತತ್ಪರನಿದ್ದನು. ಸಿದ್ಧ ಸದ್ಗುರುಗಳು ಆತನ ಸ್ಥೈರ್ಯವನ್ನು ನೋಡಿ, ಪ್ರೀತಿಯಿಂದ ಆತನಿಗೆ ಕಬೀರನೆಂದು

ಹೆಸರು ಕೊಟ್ಟರು. ಒಮ್ಮೆ ಸಿದ್ಧಾರೂಢಗುರುಗಳು ಕಬೀರನನ್ನು ಕರೆದು, ಕೂಡ್ರಲಿಕ್ಕೆ ಹೇಳಲು, ಆತನು ಗುರುಚರಣಗಳಲ್ಲಿ ಶಿರವನ್ನಿಟ್ಟು ಎದ್ದು ನಿಂತು. ಕೈ ಜೋಡಿಸಿ ಕೊಂಡು ದೈನ್ಯಭಾವದಿಂದ ನಿಂತಿರುವ ಕಬೀರದಾಸನನ್ನು ಕಂಡು ಆತನ ದೃಢತೆ ನೋಡುವದಕ್ಕೋಸ್ಕರ ಕೇಳುತ್ತಾರೆ "ಜ್ಞಾನದಿಂದ ಸಾಧ್ಯವಾಗುವ ಮೋಕ್ಷ ಸಂಪಾದನೆಗೆ ವಿವೇಕ ಒಂದು ಸಾಕು. ಇದಕ್ಕೆ ಮುಮುಕ್ಷುವು ಇತರ ಸಾಧನೆಗಳನ್ನು ಏಕೆ ಮಾಡಬೇಕು ?" ಅದಕ್ಕೆ ಕಬೀರದಾಸನು "ವೈರಾಗ್ಯವಿಲ್ಲದೆ ವಿವೇಕ ನಿಲ್ಲಲಾರದು" ಅಂದನು. ಆಗ ಸದ್ಗುರುಗಳು, "ಇವೆರಡೇ ಸಾಕು, ಹೆಚ್ಚಿನ ಸಾಧನಗಳ್ಯಾಕೆ ?" ಎಂದು ಕೇಳಲು, ಕಬೀರನು, " ಸಮಾಧಿ ಸಾಧನಗಳಿಂದ ವೈರಾಗ್ಯವು ಸ್ಥಿರವಾಗುವದು. ಇಂದ್ರಿಯ ನಿಗ್ರಹದಿಂದ ಮನೋಜಯವು ಸಿದ್ಧಿಸುವದಾದ್ದರಿಂದ, ಶಮೆಗೆ ದಮೆಯ ಸಹಾಯ ಬೇಕಾಗುವದು ಹೀಗೆ ಷಟ್ಸಾಧನಗಳು ಒಂದಕ್ಕೊಂದು ಸಹಾಯವಾಗುವದರಿಂದ ಅವೆಲ್ಲಾ ಅವಶ್ಯವಿರುವವು' ಎಂದು ನುಡಿದನು. ಇದನ್ನು ಕೇಳಿ

ಸದ್ಗುರುನಾಥರು, ಈತನ ವಾಣಿಗೆ ತಕ್ಕ ಭಾವ ಇದೆಯೋ ನೋಡೋಣ ಅಂದುಕೊಂಡು, "ಎಲೈ ಸುಜ್ಞಾನಿಯೇ ಕೇಳು. ಈ ಸಾಧನಗಳಿಂದ ಜೀವನಿಗೆ ಮರಣವೇ ಆಗುವದು. ಇವನ್ನು ನೀನು ಸರ್ವಥೈವ ಬಿಟ್ಟು ಬಿಡು ನಿನ್ನ ಸುಖದ್ದಶೆಯಿಂದ ನಾನು ಹೇಳುವೆನು ಕೇಳು, ಯಾಮಳ ಶಾಸ್ತ್ರದಲ್ಲಿ ವಶ್ಯಾಕರ್ಷಣಾದಿ ವಿಶೇಷ ಸಿದ್ಧಿಗಳು ಹೇಳಿರುತ್ತವೆ. ನೀನು ನನ್ನ ಪ್ರಿಯಶಿಷ್ಯನೆಂದು ನಾನು ಅವನ್ನು ನಿನಗೆ ಮಾತ್ರ ಹೇಳುವೆನು. ಈ ಸಿದ್ದಿಗಳನ್ನು ನೀನು ಸಾಧಿಸಿದಿಯೆಂದರೆ ನಿನಗೆ ಶಾಂತಿ ಉಂಟಾಗುವದು, ಮತ್ತು ನಿನ್ನ ಜೀವಿಕಾವೃತ್ತಿಯೂ ನಡೆದೀತು", ಎಂದು ಸದ್ಗುರು ಭಾಷಣವನ್ನು ಕೇಳಿ ಕಬೀರದಾಸನು , "ಹೇ ಗುರುರಾಯರೇ , ನೀವು ಹೇಳಿದ ಈ ಸಾಧನಗಳು ಇಹದಲ್ಲಿ ಯಷ್ಟೆ. ಅಲ್ಪ ಸುಖವನ್ನು ಕೊಟ್ಟು, ಮುಂದೆ ನರಕಕ್ಕೆ ವೈಯ್ಯುವವಾಗುತ್ತವೆ, ಎಂದು ಇವು ನನಗೆ ತ್ಯಾಜ್ಯವಾಗಿರುತ್ತವೆ ", ಎನ್ನಲು ಸದ್ಗುರುಗಳು," ಹಾಗಾದರೆ ನಿನಗೆ ಪರದಲ್ಲಿ ಸುಖ ಬೇಕಾಗಿದ್ದರೆ ಪ್ರತೀಕ ಸಮಗ್ರಾದಿ

ಉಪಾಸನೆಗಳನ್ನು ಮಾಡು ಅಥವಾ ಯೋಗವನ್ನು ಸಾಧಿಸು. ಇವುಗಳಿಂದ ಮುಂದೆ ಉತ್ತಮ ಲೋಕಗಳು ಪ್ರಾಪ್ತವಾಗುವವು', ಅಂದರು. ಅದಕ್ಕೆ ಕಬೀರನು, "ಗುರುವರ್ಯರೇ ಕೇಳಿರಿ. ಕರ್ಮಕ್ಷಯವಾದ ಕೂಡಲೇ ಈ ಲೋಕಗಳಿಂದ ಜೀವನು ಪತನನಾಗುವನು, ಆದ್ದರಿಂದ ಆ ಉಪಾಯಗಳೂ ನನಗೆ ಬೇಡ", ಎನಲು, ಸದ್ಗುರುಗಳು, "ಕೇಳೈ ಪ್ರಿಯಶಿಷ್ಯನೇ, ಸರ್ವ ಪ್ರಾಣಿಗಳಿಗೆ ಇಹದಲ್ಲಿ ಸುಖಸಾಧನಗಳಾದ ವಿಷಯಗಳನ್ನು ಸಾಧಿಸು, ವ್ಯರ್ಥ ಯಾಕೆ ಒದ್ಯಾಡುವಿ?" ಅಂದರು. ಅದಕ್ಕೆ ಕಬೀರನು, "ಶ್ರುತಿ ಹೀಗೆ ಹೇಳುತ್ತದಲ್ಲ, ಕರ್ಮಪ್ರಜಾ ಅಥವಾ ಧನ ಇವ್ಯಾವವೂ ಅಮೃತತ್ವವನ್ನು ಹೊಂದಲಿಕ್ಕೆ ಸಾಧನಗಳಾಗುವದಿಲ್ಲ. ತ್ಯಾಗ ಒಂದರಿಂದಲೇ ಅಮೃತತ್ವವು ಸಿದ್ಧಿಸುವದು', ಅದನು. ಆಗ ಸದ್ಗುರುರಾಜರು, ಈತನು ಯೋಗ್ಯ ಜ್ಞಾನಾಧಿಕಾರಿ ಇರುವನು; ಬಹಿರಂತರ ಕ್ರಮಗಳನ್ನು ತ್ಯಜಿಸಿ ಇಲ್ಲಿಗೆ ಬಂದಿರುವನು, ಎಂದು ಚಿಂತಿಸಿ, ಕಬೀರದಾಸನನ್ನು ಕುರಿತು, "ಪ್ರಿಯ ಶಿಷ್ಯನೇ, ನಿನ್ನ ಮನೋಗತವು ಏನಿದೆ ಎಂದು ತಿಳಿಸು", ಅಂದರು. ಆಗ

ಕಬೀರದಾಸರು "ಹೇ ಗುರುರಾಯರೇ, ನನ್ನ ಮನಸ್ಸಿನಲ್ಲಿ ಒಂದು ಸಂಶಯವಿರುವದು. ಅದನ್ನು ತಾವು ಕೃಪೆ ಮಾಡಿ ನಿರಸನ ಮಾಡಬೇಕು. ಅದೇನೆಂದರೆ, ಈಶಾವಾಸ್ಯೋಪನಿಷತ್ತು ಕರ್ಮಪರವೋ ಅಥವಾ ಜ್ಞಾನಪರವೋ ಎಂದು ಕೇಳಲು ಸಿದ್ಧ ಸದ್ಗುರುನಾಥರು - ಈಶಾವಾಸ್ಯೋಪನಿಷತ್ತನ್ನು ಸಂಪೂರ್ಣವಾಗಿ ವಿವರಿಸಿ ಹೇಳಿದರು. ಇದರಿಂದ ಕಬೀರನ ಸಂಶಯವೆಲ್ಲಾ ಪರಿಹಾರವಾಗಿ ಆತನ ಹೃದಯವು ಆನಂದಭರಿತವಾಗಿ ಕಬೀರನು ಅಂದದ್ದೇನೆಂದರೆ, ಇವತ್ತು ನಾನು ಧನ್ಯನಾದೆನು. ನನ್ನದು ಬಹುಪೂರ್ವ ಪುಣ್ಯವಿತ್ತೆಂದು ನನಗೆ ಸದ್ಗುರು ದರ್ಶನವಾಗಿ ಮನಸ್ಸಿನ ಸಂಶಯಗಳೆಲ್ಲಾ ಪರಿಹಾರವಾದವು, ಮತ್ತು ಪೂರ್ವಜ್ಞಾನ ಸಂಪಾದನ ಮಾಡಿಕೊಂಡನು. ಈಗ ಗುರುದಕ್ಷಿಣೆ ಕೊಡುವದ್ಯಾವದೆಂದರೆ, ನಿಮ್ಮ ಚರಿತ್ರವನ್ನು ವರ್ಣಿಸುವೆನು.ಅದನ್ನು ಶ್ರವಣ ಮಾಡುವದರಿಂದ ಜನರೆಲ್ಲಾ ಉದ್ಧಾರರಾಗುವರು. ಇದನ್ನು ಕುರಿತು ತಮ್ಮ ಆಜ್ಞೆಯಾಗಬೇಕು' ಎಂದು ಪ್ರಾರ್ಥಿಸಿದನು. ಸದ್ಗುರುಗಳು ಆಗ

ಆನಂದದಿಂದ ಕಬೀರನನ್ನು ಅಪ್ಪಿಕೊಂಡು, ಇಬ್ಬರಿಗೂ ಪ್ರೇಮಾಶ್ರುಗಳು ನಡೆದವು. ಆಮೇಲೆ ಸದ್ಗುರುಗಳು ಸವಿಸ್ತರ ಚರಿತ್ರವನ್ನು ಬರಿಯಲಿಕ್ಕೆ ಕಬೀರನಿಗೆ ಆಜ್ಞೆಯನ್ನಿತ್ತರು. ಸದ್ಗುರುಗಳ ಅತಿ ಪ್ರಿಯಶಿಷ್ಯರಾದ ಕಬೀರದಾಸರು, ಈ ಪೂರ್ವಾರ್ಧ ಗ್ರಂಥವನ್ನು ಕನ್ನಡ ಭಾಷೆಯಲ್ಲಿ ರಚಿಸಿದರು. ಅದೇ ಚರಿತ್ರವನು ಸದ್ಗುರುಗಳ ಆಜ್ಞೆಯನ್ನು ಪಡೆದುಕೊಂಡು, ಉತ್ತರಾರ್ಧ ಚರಿತ್ರಕ್ಕೆ ಜೋಡಿಸುವ ಉದ್ದೇಶವಾಗಿ ಇಲ್ಲಿ ಪುನಃ ಬರೆಯಲ್ಪಟ್ಟಿದೆ. ಇದನ್ನು ಬರೆಯುವವನು ಆ ಸದ್ಗುರುನಾಥನೇ ಹೊರ್ತು ಅಜ್ಞನಾಗಿಯೂ ಮಂದಮತಿಯಾಗಿಯೂ ಇರುವ ನನ್ನಿಂದ ಏನಾದೀತು. ನನ್ನನ್ನು ನಿಮಿತ್ತ ಮಾತ್ರ ಮಾಡಿರುವನು. ಇಲ್ಲಿಗೆ ಪೂರ್ವಾರ್ಧ ಸಮಾಪ್ತವಾಯಿತು. ಇದು ಪೂರ್ಣ ಜ್ಞಾನಭರಿತವಾಗಿರುವದರಿಂದ, ಇದರ ಶ್ರವಣ ಮಾತ್ರದಿಂದ ಮುಮುಕ್ಷುಗಳಿಗೆ ಜ್ಞಾನ ಸಿದ್ಧಿಸುವುದು ಎಂದು ಸದ್ಗುರುಗಳು ಈ ಗ್ರಂಥಕ್ಕೆ ವರಪ್ರಧಾನ ಕೊಟ್ಟಿರುವರು. ಮುಂದೆ ಸುರಸವಾದ ಉತ್ತರಾರ್ಧ ಗ್ರಂಥವು ಆರಂಭವಾಗುವುದು. ಅದರೊಳಗೆ ಸದ್ಗುರುನಾಥನ

ವಿಶೇಷವಾದ ಮಹಿಮೆಯು ವರ್ಣಿಸಲ್ಪಟ್ಟಿರುತ್ತದೆ. ಎಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನೆಲ್ಲ ಭಸ್ಮ ಮಾಡುವಂಥ ಈ ತ್ರಯೋದಶಾಧ್ಯಾಯವನ್ನು ಶಿವದಾಸನು ಶ್ರೀ ಸಿದ್ಧಾರೂಢ ಸದ್ಗುರಗಳ ಚರಣಾರವಿಂದಗಳಲ್ಲಿ ಅರ್ಪಿಸಿರುವನು.